## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1163/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ಬಸಪ್ಪ ತಂದೆ ಭೀಮಶಪ್ಪ ಇಮಲಾಪೂರ,
ವಃ 42 ವರ್ಷ, ಉಃ ಒಕ್ಕಲುತನ,
ಸಾಃ ನಾಚವಾರ.

2 ಸಿದ್ದಪ್ಪ ತಂದೆ ಲಕ್ಷ್ಮಣ ಇಮಲಾಪೂರ,
ವಃ 20 ವರ್ಷ, ಉಃ ಒಕ್ಕಲುತನ,
ಸಾಃ ನಾಚವಾರ .

3 ನರಸಪ್ಪ ತಂದೆ ಭೀಮರಾಯ ಇಮಲಾಪೂರ,
ವಃ 32 ವರ್ಷ, ಉಃ ಒಕ್ಕಲುತನ,
ಸಾಃ ನಾಚವಾರ .

4 ಕಾಶಪ್ಪ ತಂದೆ ಬಿಚ್ಚಪ್ಪ ಇಮಲಾಪೂರ,
ವಃ 59 ವರ್ಷ, ಉಃ ಒಕ್ಕಲುತನ,
ಸಾಃ ನಾಚವಾರ .

----

### ದೋಷಾರೋಪಣೆ

ನಾನು ಶ್ರೀಮತಿ ಲಲಿತಾ ಕುದರಿಮತಿ, ಬಿಕಾಂ.,ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 20-08-2020 ರಂದು 10.30 ಎ.ಎಮ್ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ನಾಚವಾರ ಗ್ರಾಮದ ಸೀಮಾಂತರದ ಬಸಪ್ಪ ಇಮಲಾಪೂರ ಇವರ ಹೊಲದಲ್ಲಿ ಆರೋಪಿ 1 ನೇದ್ದವನು ಎತ್ತುಗಳನ್ನು ಹೊಡೆದುಕೊಂಡು ಹೋಗುತ್ತಿರುವ ಚಾಸಾ 1 ನೇದ್ದವನಿಗೆ ಹಳೆ ಮಾತಿನ ವೈಶ್ಯಮ್ಯದಿಂದ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 341 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಹೋಗುತ್ತಿದ್ದ ಚಾಸಾ 1 ರವರನ್ನು ತಡೆದು ನಿಲ್ಲಿಸಿ ರಂಡಿಮಗನೇ ನಮ್ಮ ಹೊಲದ ಮೇಲಿಂದ ಎತ್ತುಗಳು ಹೊಡೆದುಕೊಂಡು ಹೋಗುತ್ತಿದ್ದೀ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಭಾ.ದಂ.ಸಂ. 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ

ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ 1 ನೆದ್ದವನಿಗೆ ತಡೆದು ನಿಲ್ಲಿಸಿ, ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ 1 ರವರನ್ನು ತಡೆದು ನಿಲ್ಲಿಸಿ ಜಗಳ ತೆಗೆದು ಕೊಡಲಿ ಕಾವಿನಿಂದ ಎಡಗೈ ಹೆಡಕಿನ ಮೇಲೆ , ಬೆನ್ನಿಗೆ ಹೊಡೆದು ಗುಪ್ತಗಾಯ ಮಾಡಿದ್ದು ಆ ಮೂಲಕ ಭಾ.ದಂ.ಸಂ. 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಬಂದು ಚಾಸಾ 1 ರವರೊಂದಿಗೆ ಜಗಳ ತಗೆದು ಆರೋಪಿ 3 ಮತ್ತು 4 ಇವರು ಬಂದು ಈ ರಂಡಿ ಮಗನಿಗೆ ಸಾಯಿಸಿ ಬಿಡರಿ ಜೀವ ಸಹಿತ ಬಿಡಬ್ಯಾಡರಿ ಎಂದು ಜೀವದ ಭಯ ಹಾಕಿದ್ದು ಆ ಮೂಲಕ ಭಾ.ದಂ.ಸಂ. 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ದಿನಾಂಕಃ 12-06-2024 ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1163/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ಬಸಪ್ಪ ತಂದೆ ಭೀಮಶಪ್ಪ ಇಮಲಾಪೂರ,
ವಃ 42 ವರ್ಷ, ಉಃ ಒಕ್ಕಲುತನ,
ಸಾಃ ನಾಚವಾರ ಹಾಗೂ ಇತರರು .

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ.1

ಆ.2

ಆ.3

ಆ.4

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ.1

ಆ.2

ಆ.3

ಆ.4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 12-06-2024 ಪ್ರ.ದ.ನ್ಯಾದಂ. ಸೇಡಂ.